**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1770/2022**

**ಚಾ.ಸಾ.** 2

**ಪ್ರಾ.ಸಾ.** 2

**ದಿನಾಂಕಃ 07.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಗಂಗಪ್ಪ ಉಡೇದ |
| ತಂದೆಃ ಗಂಡನ ಹೆಸರು | ಬಸಪ್ಪ |
| ಉದ್ಯೋಗ | ವ್ಯವಸಾಯ |
| ವಯಸ್ಸು | 63 |
| ವಾಸಸ್ಥಳ | ಶಿವನಪುರ |

**ಪ್ರಾರಂಭ ಸಮಯಃ 12.55 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಸಾಕ್ಷಿಗೆ ನಿಪಿ2 ನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ನಿಪಿ2 ಕ್ಕೆ ನಾನು ಯಾವ ಸ್ಥಳದಲ್ಲಿ ಮತ್ತು ಯಾವ ವಿಚಾರವಾಗಿ ಸಹಿ ಮಾಡಿದ್ದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ನಿಪಿ2 ಕ್ಕೆ ನಾನು ದಿಃ15.04.2022 ರಂದು ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನನ್ನೊಂದಿಗೆ ಚಾಸಾ.3 ರವರು ಬಂದಿದ್ದರು ಅಂದರೆ ಸರಿಯಲ್ಲ. ನಮ್ಮನ್ನು ಶಿವನಪುರ ಗ್ರಾಮದ ಬಸ್ ನಿಲ್ದಾಣದ ಬಳಿ ಕರೆಸಿದ್ದರು ಅಂದರೆ ಸರಿಯಲ್ಲ. ನಮ್ಮ ಸಮಕ್ಷಮ ಅಕ್ರಮ ಮದ್ಯ ಮಾರಾಟದ ದಾಳಿ ಮಾಡಲು ನಮ್ಮನ್ನು ಕರೆಸಿದ್ದರು ಅಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪೊಲೀಸರು ನಿಪಿ2 ರಂತೆ ಪಂಚನಾಮೆ ಜರುಗಿಸಿ ಅಪಾದಿತನ ತಾಬಾದಲ್ಲಿದ್ದಂತಹ ಮು ಮಾ1 ನ್ನು ವಶಪಡಿಸಿಕೊಂಡರು ಅಂದರೆ ಸರಿಯಲ್ಲ. ನಿಪಿ2 ನ್ನು ರಾತ್ರಿ 08.00 ರಿಂದ 09.00 ರವರೆಗೆ ಜರುಗಿಸಿದರು ಅಂದರೆ ಸರಿಯಲ್ಲ. ನಿಪಿ2 ರಲ್ಲಿರುವ ಎಲ್ಲಾ ಅಂಶಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ ಕೆ ಬಿ ಜಿ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**